ಅ) ಒಂದು ಆಟೆಂಡರ್ ಹುದ್ದೆ, ಒಂದು ಮುಖ್ಯೋಪಾಧ್ಯಾಯರ ಹುದ್ದೆ ಖಾಲಿ ಇದೆ. ಮುಖ್ಯೋಪಾಧ್ಯಾಯರ ಹುದ್ದೆಯನ್ನು ಬಡ್ತಿ ಮೂಲಕ ತುಂಬಲು ಆದೇಶ ಹೊರಡಿಸಲಾಗಿದೆ. ಖಾಲಿ ಇರುವ ಆಟೆಂಡರ್ ಹುದ್ದೆಯನ್ನು ಬಡ್ತಿ ಮೂಲಕ ತುಂಬಲಾಗುವುದು.

ಕುಂದಾಪುರ ತಾಲ್ಲೂಕಿನಲ್ಲಿರುವ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ

೧೦೫೮. ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಲೋಕೋಪಯೋಗಿ, ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರದಲ್ಲಿರುವ ಸಣ್ಣ ನೀರಾವರಿ ಯೋಜನೆಗಳೆಷ್ಟು ?
ಆ) ಆ ಪೈಕಿ, ದುರಸ್ತಿಯಾಗಬೇಕಾದ ಸಣ್ಣ ನೀರಾವರಿ ಕಾಮಗಾರಿಗಳೆಷ್ಟು ?
ಇ) ಅವುಗಳನ್ನು ಯಾವಾಗ ದುರಸ್ತಿಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೩೦೯.
ಆ) ೨೦೦
ಇ) ಹಣಕಾಸಿನ ಲಭ್ಯತೆಯನ್ನವಲಂಬಿಸಿ ದುರಸ್ತಿಗೊಳಿಸಲಾಗುವುದು, ಹಂತ ಹಂತವಾಗಿ, ಕ್ರಮ ಕೈಗೊಳ್ಳಲಾಗುವುದು.

ಕುಂದಾಪುರ ಕ್ಷೇತ್ರದ ಕೋಟೇಶ್ವರ ಸರ್ಕಾರಿ ಕಿರಿಯ ಕಾಲೇಜಿಗೆ ಮಂಜೂರಾದ ಹುದ್ದೆಗಳ ಬಗ್ಗೆ

೧೦೧೧. ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರ ಕ್ಷೇತ್ರದ ಕೋಟೇಶ್ವರ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಮಂಜೂರಾದ ವಿವಿಧ ದರ್ಜೆಯ ಹುದ್ದೆಗಳೆಷ್ಟು ?

ಆ) ಕೊರತೆ ಇರುವ ವಿವಿಧ ಹುದ್ದೆಗಳೆಷ್ಟು ? ಯಾವ ವಿಷಯದಲ್ಲಿ ಉಪನ್ಯಾಸಕರ ಹುದ್ದೆಗಳು ಇದೆ ಹಾಗೂ ಅವನ್ನು ಎಂದು ತುಂಬಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಕುಂದಾಪುರ ಕ್ಷೇತ್ರದ ಕೋಟೇಶ್ವರ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಈ ಕೆಳಕಂಡ ಬೋಧಕ ಹುದ್ದೆಗಳು ಮಂಜೂರಾಗಿರುತ್ತದೆ.

೧.	ಕನ್ನಡ	...	೧
೨.	ಆಂಗ್ಲ ಭಾಷೆ	...	೧
೩.	ಇತಿಹಾಸ	...	೧
೪.	ಅರ್ಥಶಾಸ್ತ್ರ	...	೧
೫.	ರಾಜ್ಯ ಶಾಸ್ತ್ರ	...	೧
೬.	ಸಮಾಜ ಶಾಸ್ತ್ರ	...	೧
೭.	ವಾಣಿಜ್ಯ ಶಾಸ್ತ್ರ	...	೧
೮.	ಭೌತ ಶಾಸ್ತ್ರ	...	೧
೯.	ರಸಾಯನ ಶಾಸ್ತ್ರ	.	೧
೧೦.	ಗಣಿತ ಶಾಸ್ತ್ರ	...	೧
೧೧.	ಜೀವಶಾಸ್ತ್ರ	...	೧
		... ಒಟ್ಟಿಗೆ	೧೧